**ದಿನಾಂಕ: 06-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯವಿಚಾರಣೆ: 4ನೇ ಪ್ರತಿವಾದಿ ಪರ ಶ್ರೀ.ಕೆ.ಎಸ್.ಎಂ. ವಕೀಲರಿಂದ**

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಸದರಿ ಪ್ರಮಾಣ ಪತ್ರದಲ್ಲಿರುವ ಎಲ್ಲಾ ಅಂಶಗಳು ಸತ್ಯವಾಗಿದ್ದು ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ ಎಂದು ನುಡಿದಿರುತ್ತಾರೆ.

| | |
|---|---|
| ನಿಡಿ-1 ರಿಂದ 5 | 5 ಪಹಣಿಗಳ ದೃಢೀಕೃತ ನಕಲು |
| ನಿಡಿ-6 | ದಿನಾಂಕ 20-07-1994ರ ಖರೀದಿ ಪತ್ರದ ದೃಢೀಕೃತ ನಕಲು |
| ನಿಡಿ-7 | ದಿನಾಂಕ 21-07-1994ರ ಖರೀದಿ ಪತ್ರದ ದೃಢೀಕೃತ ನಕಲು |
| ನಿಡಿ-8 ಮತ್ತು 9 | 2 Mortgage ನ Online ಪ್ರತಿ |
| ನಿಡಿ-10 | ಭೂಸ್ವಾಧೀನ ಆದಂತಹ ದಾಖಲೆ |
| ನಿಡಿ-11 ರಿಂದ 46 | 36 ಪಹಣಿಗಳು |
| ನಿಡಿ-47 ರಿಂದ 51 | 5 ಮುಟೇಷನಗಳ ದೃಢೀಕೃತ ನಕಲು |
| ನಿಡಿ-52 | Encumbrance Certificate |
| ನಿಡಿ-53 ರಿಂದ 68 | 16 ಫೋಟೊಗಳು |
| ನಿಡಿ-69 | 1 ಪೆನ್ ಡ್ರೈವ್ |

**ಪಾಟೀ ಸವಾಲುः ವಾದಿ ಪರ ಶ್ರೀ ಪಿ.ಪಿ.ಕೆ. ವಕೀಲರಿಂದः**

1. ನಾನು SSLC ವರೆಗೆ ವಿದ್ಯಬ್ಯಾಸ ಮಾಡಿರುತ್ತೇನೆ. ಜಮೀನುಗಳನ್ನು ಬಾಪುಗೌಡ ಎನ್ನುವವರು ತಮ್ಮ ಮಕ್ಕಳ ಹೆಸರಿನಲ್ಲಿ ಮಾಡಿದ್ದರು ಎಂದರೆ ಸರಿಯಲ್ಲ. ಸಾಕ್ಷಿಗೆ ನಿಪಿ-3 ಪಹಣಿಯನ್ನು ತೋರಿಸಲಾಗಿ ಸದರಿ ಆಸ್ತಿಯನ್ನು ಬಾಪುಗೌಡರವರು ತನ್ನ ಮಕ್ಕಳ ಹೆಸರಿನಲ್ಲಿ ಮಾಡಿದ್ದರು ಎಂದರೆ ಸಾಕ್ಷಿಯು ಅದನ್ನು ನೋಡಿ ಸುಳ್ಳು ಎಂದು ಉತ್ತರಿಸುತ್ತಾರೆ. ಖರೀದಿ ಮಾಡುವ ಸಮಯದಲ್ಲಿ ಹಿಂದಿನ ಏನೇನು ದಾಖಲೆಗಳನ್ನು ನೋಡಿ ಜಮೀನನ್ನು ಖರೀದಿ ಮಾಡಿದ್ದೀರಿ ಎಂದರೆ ಬಾಪುಗೌಡನ ಹೆಸರಿನಲ್ಲಿ ದಾಖಲೆ ನೋಡಿ ತೆಗೆದುಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ನಿಪಿ-2 ಪಹಣಿಯನ್ನು

ತೋರಿಸಲಾಗಿ ಅದರ ಬಗ್ಗೆ ಯಾವುದೇ ಮುಟೇಷನ್ ಇಲ್ಲ ಆ ದಾಖಲೆ ಏನಾದರೂ ಹಾಜರುಪಡಿಸಿದ್ದೀರಾ ಎಂದರೆ ಪಹಣಿ ನೋಡಿ ರಿಜಿಸ್ಟರ್ ಮಾಡಿಕೊಂಡಿರುತ್ತೇವೆ ಎಂದು ಉತ್ತರಿಸುತ್ತಾರೆ. ಬಾಪುಗೌಡ ಅಪೀಲು ಏನಾದರೂ ಮಾಡಿದ್ದಾರಾ ಎಂದರೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಅಪ್ರಾಪ್ತ ವಯಸ್ಕರ ಹೆಸರಿನಲ್ಲಿ ಇರುವಂತಹ ಆಸ್ತಿಯನ್ನು ಬಾಪುಗೌಡನ ಹೆಸರಿನಲ್ಲಿ ಮಾಡಲು ಬರುವುದಿಲ್ಲದಿದ್ದರೂ ಸಹ ನೀವು ದಾಖಲೆಯನ್ನು ಸೃಷ್ಠಿ ಮಾಡಿದ್ದೀರಿ ಎಂದರೆ ಸರಿಯಲ್ಲ. ಖರೀದಿ ಪತ್ರದಲ್ಲಿ ಬಾಪುಗೌಡನ ಹೆಂಡತಿಯ ಸಹಿ ಆಗಲೀ ಅವರ ಅಣ್ಣನ ಸಹಿ ಆಗಲೀ ಪಡೆದಿದ್ದೀರಾ ಎಂದರೆ ಅವರ ಹೆಸರಿನಲ್ಲಿ ಪಹಣಿ ಇರುವ ಸಲುವಾಗಿ ಸಹಿ ಪಡೆದಿಲ್ಲ ಎಂದು ಉತ್ತರಿಸುತ್ತಾರೆ.

2. ಬಾಪುಗೌಡನ ಸಂಸಾರ ಅಡಚಣೆ ಮತ್ತು ಮಕ್ಕಳ ವಿದ್ಯಭ್ಯಾಸ ಮತ್ತು ಉದ್ಯೋಗದ ಸಲುವಾಗಿ ಹಣದ ಅವಶ್ಯಕತೆ ಇರುವ ಸಲುವಾಗಿ ಜಮೀನನ್ನು ಮಾರಾಟ ಮಾಡಿರುತ್ತಾರೆ. ಈ ರೀತಿ ಖರೀದಿ ಪತ್ರದಲ್ಲಿ ಬರೆದುಕೊಂಡಿದ್ದೀರಾ ಎಂದರೆ ಗೊತ್ತಿಲ್ಲ. ಸಿದ್ದಪ್ಪಗೌಡ, ರುದ್ರಪ್ಪಗೌಡ ಮುಟೆಷನ್ ಆದಾಗ ಅಪ್ರಾಪ್ತ ವಯಸ್ಕರಿದ್ದರು ಎಂದರೆ ದಾವೆ ಮಾಡಿದ ನಂತರ ಪರಿಚಯ ಇರುತ್ತಾರೆ ಮೊದಲು ಗೊತ್ತಿರಲಿಲ್ಲ ಎಂದು ಉತ್ತರಿಸುತ್ತಾರೆ.

3. ಬಾಪುಗೌಡ ಊರಿನಲ್ಲಿ ಇರುತ್ತಿರಲಿಲ್ಲ ಎಂದರೆ ಇರುತ್ತಿದ್ದರು ಎಂದು ಉತ್ತರಿಸುತ್ತಾರೆ. ಆ ದಿನ ಬಾಪುಗೌಡ ಊರಿನಲ್ಲಿ ಇಲ್ಲದ ಸಮಯದಲ್ಲಿ ಬೇರೆಯವರಿಗೆ ನಿಲ್ಲಿಸಿ ದಾಖಲೆಯನ್ನು ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಬಾಪುಗೌಡ ತನ್ನ ಮಕ್ಕಳ ಹೆಸರಿನಲ್ಲಿ ಆಸ್ತಿಯನ್ನು ಮಾಡಿದ ನಂತರ ಎಲ್ಲಿಯು ಅಪೀಲು ಮಾಡಿಲ್ಲ ಮತ್ತು ತಹಸೀಲಿನಲ್ಲಿ ಹೋಗಿ ಅರ್ಜಿಯನ್ನು ಕೊಟ್ಟು ಮುಟೇಷನ್ ಮಾಡಿಲ್ಲ ಎಂದರೆ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಬಾಪುಗೌಡ ತಹಸೀಲನಲ್ಲಿ ಕೊಟ್ಟಂತಹ ಅರ್ಜಿಯನ್ನು ಹಾಜರುಪಡಿಸಿದ್ದೀರಾ ಎಂದರೆ ಹಾಕುತ್ತೇವೆ ಎಂದು ಉತ್ತರಿಸುತ್ತಾರೆ. ನೀವು ನಿಮ್ಮ ಪ್ರತಿವಾದ ಪತ್ರವನ್ನು ಹಾಕುವ ಸಮಯದಲ್ಲಾಗಲೀ ಈ ಅರ್ಜಿಯನ್ನು ಹಾಕಲು ತೊಂದರೆ ಏನಾದರೂ ಇತ್ತಾ ಎಂದರೆ ನನಗೆ ಆರಾಮ ಇದ್ದಿದ್ದಿಲ್ಲ ಎಂದು ಉತ್ತರಿಸುತ್ತಾರೆ. ನನಗೆ 15 ದಿನಗಳವರೆಗೆ ಆರಾಮ ಇರಲಿಲ್ಲ. ಯಾವಾಗ ಆರಾಮ ಆಗಿ ಬಂದಿದ್ದೀರಿ ಎಂದರೆ 15 ದಿನಗಳ ನಂತರ ಬಂದಿರುತ್ತೇವೆ ಎಂದು ಉತ್ತರಿಸುತ್ತಾರೆ.

4. ಬಾಪುಗೌಡ ನನಗೆ ಪರಿಚಯ ಇದ್ದರು. ಬಾಪುಗೌಡ ಊರಿನಲ್ಲಿ ಇಲ್ಲದ ಸಮಯದಲ್ಲಿ ಖೊಟ್ಟಿ ಪಹಣಿಯನ್ನು ಮಾಡಿಕೊಂಡು ಖೊಟ್ಟಿ ದಾಖಲೆ ಮಾಡಿಕೊಂಡಿದ್ದೀರಿ ಎಂದರೆ ಸರಿಯಲ್ಲ.

**ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ.ಕೇ. ಸರಿ ಅದೆ

ಹಿರಿಯ ಸಿವಿಲ್ ಮತ್ತು ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಜೇವರ್ಗಿ